ಶ್ರೀ ಬಿ. ಬಸವಲಿಂಗಪ್ಪ.—ಆಂಧ್ರ ಪ್ರದೇಶದಲ್ಲಿ ಅಲ್ಲಿನ ಹೆಣ್ಣುಮಕ್ಕಳಿಗೆ ಸಮಾನ ಆಸ್ತಿ ಹಕ್ಕನ್ನು ನೀಡುವ ಕಾನೂನನ್ನು ಜಾರಿಗೆ ತಂದಮೇಲೆ ಇಲ್ಲಿನ ಮಂಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಒಂದು ವರ್ಷದ ಹಿಂದೆ ನಮ್ಮ ರಾಜ್ಯದಲ್ಲಿಯೂ ಇಂತಹ ಕಾನೂನು ಜಾರಿಗೆ ತರುವುದಾಗಿ ಹೇಳಿದರು. ಆದರೆ ಈಗ ಮಾನ್ಯ ಕಾನೂನು ಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತರಲು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ನಾನು ತಮಗೆ ಕೇಳ ತ್ತೇನೆ, ಏನೆಂದರೆ ವಿಧಾನ ಸಭಾ ಸದಸ್ಯರಿಗೆ ಸಂಬಳ ಜಾಸ್ತಿ ಮಾಡುವಾಗ ಸಾರ್ವಜನಿಕರ ಅಭಿಪ್ರಾಯ ಪಡೆಯಲಾಯಿತೇ? ಈಗ ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರ ಅಭಿಪ್ರಾಯ ಪಡೆಯ ಬೇಕೆಂದಿದ್ದರೆ, ಇದಕ್ಕೆ ಸಂಬಂಧ ಪಟ್ಟ ಡ್ರಾಫ್ಟ್ ನೋಟಿಫಿಕೇಷನ್ ತಯಾರು ಮಾಡಿದ್ದೀರಾ ? ಇದನ್ನು ತಯಾರು ಮಾಡಿದರೆ, ಸಾರ್ವ ಜನಿಕರ ಅಭಿಪ್ರಾಯಕ್ಕಾಗಿ ಯಾವಾಗ ಕಳುಹಿಸಿ ಕೊಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರ ಅಭಿಪ್ರಾಯ ನನಗೆ ವೇದ್ಯವಾಗಿದೆ. ಉದ್ದೇಶಪೂರ್ವಕವಾಗಿ ಇದನ್ನು ತಡೆಹಿಡಿಯುವಂತಹ ಉದ್ದೇಶವನ್ನು ನಾವು ಇಟ್ಟುಕೊಂಡಿಲ್ಲ. ಆಂಧ್ರ ದಲ್ಲಿ ರಿಪೋರ್ಟರಲ್ಲಿಯೇ ಈ ಬಗ್ಗೆ ಕಾನೂನು ಮಾಡಬೇಕೆಂದು ತೀರ್ಮಾನ ಮಾಡಿದ್ದರೂ ಸಹ ನಾನು ನಿನ್ನೆ ಅಲ್ಲಿಗೆ ಫೋನ್ ಮಾಡಿ ತಿಳಿದುಕೊಂಡ ಪ್ರಕಾರ, ಇತ್ತೀಚೆಗೆ ಅಲ್ಲಿನ ಕಾನೂನು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದುಕೊಂಡು ಈಗ ಜಾರಿಗೆ ಬರುವ ಹಂತದಲ್ಲಿದೆ. ಇಲ್ಲಿ ನಾವು ನಿಯಮಗಳ ಪ್ರಕಾರ ಕರಡು ಪ್ರತಿ ಯನ್ನು ತಯಾರಿಸಿ ಸಾರ್ವಜನಿಕರ ಮುಂದೆ ಇಟ್ಟಿದ್ದೇವೆ ಆದಷ್ಟು ಬೇಗ ಈ ಕಾನೂನನ್ನು ಜಾರಿಗೆ ತರುವ ವ್ಯವಸ್ಥೆ ಮಾಡುತ್ತೇವೆ. ನಂತರ ರೂಲ್ಸ್ ಪ್ರಕಾರ ಮಾಡತಕ್ಕಂಥಾದ್ದು ಸಾರ್ವಜನಿಕರ ಗಮನಕ್ಕೆ ಇದನ್ನು ತಂದು ಸಾರ್ವಜನಿಕರ ಅಭಿಪ್ರಾಯಗಳನ್ನು ತೆಗೆದುಕೊಂಡು ಅವುಗಳನ್ನೆಲ್ಲಾ ಕ್ರೋಢೀ ಕರಿಸಿ ಇದು ಸರಿಯಾಗಿದೆ ಎಂದು ಸಮ್ಮತಿ ಬಂದರೆ ಇದಕ್ಕೆ ಹೆಚ್ಚು ಪ್ರಬಲವಾದಂಥ ಮನ್ನಣೆ ಸಿಗತಕ್ಕ ಸನ್ನಿವೇಶ ಇದೆ. ಆದ್ದರಿಂದ ಸಾರ್ವಜನಿಕರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು ಎನ್ನುವಂಥ ವಿಚಾರವನ್ನು ಇಟ್ಟುಕೊಂಡಿದೆ.

ಶ್ರೀ ಬಿ. ಬಸವಲಿಂಗಪ್ಪ.—ಯಾವಾಗ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಬೇಗ ಮಾಡುತ್ತೇವೆ, ತಾರೀಖು ಕೊಡುವುದಕ್ಕಾಗುವುದಿಲ್ಲ!

ಶ್ರೀ ಎಂ. ವೀರಪ್ಪಾರ್ಜುನ ಖರ್ಗೆ.—ಇದನ್ನು ಮಾಡುವುದರಿಂದ ತಮಗೆ ಲಾಭವೋ ನುಕ್ಸಾನೋ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಮಾಡುವಾಗ ಒಬ್ಬರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡುವುದರಿಂದ ಮಾನ್ಯ ಖರ್ಗೆ ಯವರಿಗೆ ಅನಾನುಕೂಲವಾದರೂ ಆಗಬಹುದು ನನಗಂತೂ ಅನುಕೂಲವೂ ಇಲ್ಲ ಅನಾನುಕೂಲವೂ ಇಲ್ಲ.

ಮೊಹರು ಹಾಕಿರುವ ಸಾರಾಯಿ ಸೀಸೆಯ ಬೆಲೆ

(೪) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರಾಯಿ ಮಾರುವ ಕಂಟ್ರಾಕ್ಟರುಗಳಿಗೆ ಲೀಟರ್ ಒಂದಕ್ಕೆ ಮೊಹರು ಹಾಕಿರುವ ಸೀಸೆಯ ಬೆಲೆ ಎಷ್ಟು ಹಾಗೂ ಬಾಟಲಿಗೆ ಲೀಟರ್ ಒಂದಕ್ಕೆ ನಿಗಧಿಪಡಿಸಿರುವ ಬೆಲೆ ಎಷ್ಟು ?

ಆ) ಸಾರಾಯಿ ಮಾರಾಟ ಮಾಡಲು ಗುತ್ತಿಗೆದಾರರಿಗೆ ನೀಡುವಾಗ ಷರತ್ತುಗಳನ್ನು ಅನುಸರಿ ಸುವ ನಿಯಮಗಳೇನು ಹಾಗೂ ಷರತ್ತುಗಳೇನಾದರೂ ಹಾಕಲಾಗುವುದೇ ?

ಇ) ಹಾಗಿದ್ದಲ್ಲಿ, ಸದರಿ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಕೈಗೊಂಡ ಕ್ರಮಗಳೇನು ?

ಈ) ೧೯೮೬-೮೭ನೇ ಸಾಲಿನಲ್ಲಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬಂದ ಹಣವೆಷ್ಟು ?

ಶ್ರೀ ಡಿ. ಬಿ. ಇನಾಂದಾರ್ (ಅಬಕಾರಿ ಮಂತ್ರಿಗಳು).—

ಅ) ಸಾರಾಯಿಯನ್ನು ೭೫೦ ಮಿ.ಲಿ, ೧೮೦ ಮತ್ತು ೯೦೦ ಮಿಲಿ ಲೀಟರ್‌ಗಳಲ್ಲಿ ಸರಬರಾಜು ಮಾಡಲಾಗುತ್ತಿದೆ ಕಂಟ್ರಾಕ್ಟರುಗಳಿಗೆ ಸಾರಾಯಿಯನ್ನು ಮಾರಾಟ ಮಾಡುವ ಬೆಲೆಯ ವಿವರವನ್ನು ಅನುಬಂಧ-೧ರಲ್ಲಿ ಲಗತ್ತಿಸಿದೆ.

ಆ) ಕರ್ನಾಟಕ ಅಬಕಾರಿ (ಪದ್ಮವನ್ನು ಚಿಲ್ಲರೆಯಾಗಿ ಮಾರಾಟ ಮಾಡುವ) ನಿಯಮಾವಳಿ ೧೯೬೯ರ ಮೇರೆಗೆ ಸಾರಾಯಿ ಗುತ್ತಿಗೆದಾರರಿಗೆ ಸನ್ನದುಗಳು ಕೊಡಲಾಗುವುದು ಸದರಿ ಸನ್ನದಗಳು ಅಬಕಾರಿ ಕಾಯಿದೆ ಮತ್ತು ನಿಯಮಾವಳಿಗೆ ಒಳಪಟ್ಟಿರುತ್ತವೆ.

ಇ) ಅಬಕಾರಿ ಕಾಯಿದೆ ಮತ್ತು ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿದವರ ಮೇಲೆ ಕಾನೂನಿನ ಪ್ರಕಾರ ಕ್ರಮ ಜರುಗಿಸಲಾಗುತ್ತಿದೆ.

ಈ) ಸಾರಾಯಿ ಗುತ್ತಿಗೆದಾರರಿಂದ ೧೯೮೬-೮೭ನೇ ಸಾಲಿನಲ್ಲಿ ಸವಾಲುಗಳಿಂದ ೯೮.೫೬ ಕೋಟಿ ರೂಪಾಯಿಗಳಷ್ಟು ಹಣ ಸರ್ಕಾರಕ್ಕೆ ಬಂದಿರುವುದು.

ANNEXURE-I

All prices in Rupees.

Per bottle of	750 ML	375 ML.	180 ML.	180 ML.
Arrack price	1,5300	0,7600	0.3700	0,2030
Duty	3.7500	1.8750	0.9000	0.5000
Sales tax @ 10% on price of arrack including duty.	0.5280	0.2635	0.1270	0.0703
Total	5.8080	2.8985	1.3970	0.7733
Bottling charges	3.0000	1.3000	0.9500	0.8000
Sales tax @ 7% in cash on bottling charges.	0 2100	0.0910	0.0665	0.0560
Total	9.0180	4.2895	2.6435	1.6293
Sales Tax @ 3% in shape of Bank guarantee on bottling charges.	0.0900	0.0390	0.0285	0.0240

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಈ ಗವರ್ನಮೆಂಟ್ ಸಾರಾಯಿಯನ್ನು ಲೀಟರ್‌ಗೆ ಯಾವ ರೇಟ ನಲ್ಲಿ ಮಾಡುತ್ತಾ ಇದ್ದಾರೆ, ಕಂಟ್ರಾಕ್ಟರು ಯಾವ ರೇಟಿನಲ್ಲಿ ಮಾರುತ್ತಾ ಇದ್ದಾರೆ,ಎಂದು ಹೇಳಲಿ ಅವರು ಸೀಲ್ ಮಾಡಿರುವುದನ್ನು ಲೀಟರ್‌ಗೆ ೧೨ರೂಪಾಯಿಯಂತೆ ಮಾರುತ್ತಾ ಇದ್ದಾರೆ, ಲೂಸ್ ೬ ರೂಪಾಯಿಗೆ ಮಾಡುತ್ತಾ ಇದ್ದಾರೆ. ಈ ವಿಚಾರವನ್ನು ಮಾನ್ಯ ಸಚಿವರು ಮುಚ್ಚಿಟ್ಟಿದ್ದಾರೆ. ಎರಡನೆಯದಾಗಿ ಅಬ್ಕಾರಿ ಕಂಟ್ರಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳು

ತ್ತೇವೆ ಎಂದು ಹೇಳಿದರು. ಹಾಗಾದರೆ ಇದುವರೆಗೆ ಇದನ್ನು ಉಲ್ಲಂಘನೆ ಮಾಡಿದ ಎಷ್ಟು ಮಂದಿ ಮೇಲೆ ಕ್ರಮ ಕೈಗೊಂಡಿದ್ದಾರೆ. ಮೂರನೆಯದಾಗಿ, ಭದ್ರಾವತಿ ಒಂದರಲ್ಲಿ ೭ ಲಕ್ಷ ಚಿಲ್ಲರೆಗೆ ಟೆಂಡರ್ ಕರೆದು ಅಬ್ಯಾರಿ ಕಂಟ್ರಾಕ್ಟರ್ ಹಣ ತುಂಬಿ, ಆಮೇಲೆ ಅದು ಬೇಡ ಎಂದು ವಾಪಸ್ ತೆಗೆದುಕೊಂಡಿದ್ದಾರೆ. ಹೀಗಾಗಿ ಭದ್ರಾವತಿಯ ಒಂದೇ ಒಂದು ತಾಲ್ಲೂಕಿನಲ್ಲಿ ಒಂದು ವರ್ಷಕ್ಕೆ ೪೮ ಲಕ್ಷ ರೂಪಾಯಿ ಲಾಸ್ ಆಗಿದೆ. ಅಂಥಾದ್ದು ಇಡೀ ಕರ್ನಾಟಕದಲ್ಲಿ ಎಷ್ಟು ಆಗಿರಬಹುದು.

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೆ, ಭದ್ರಾವತಿ ಟಾಡಿ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಈಗಾಗಲೇ ರೀಆಕ್ಷನ್‌ಗೆ ಆರ್ಡರ್ ಮಾಡಿದ್ದೇವೆ, ರೀಆಕ್ಷನ್ ಆಗಿದೆ. ಏಕೆಂದರೆ, ಮೊದಲಿದ್ದಂಥ ಒಬ್ಬ ಕಂಟ್ರಾಕ್ಟರು ಫೈನಾನ್ಷಿಯಲ್ಲಿ ನಾಟ್ ಸೌಂಡ್ ಎನ್ನುವ ಅಭಿಪ್ರಾಯ ಬಂದ ಮೇಲೆ ಟೆಂಡರ್ ಕನ್‌ಫರ್ಮ್ ಆಗಲಿಲ್ಲ. ಆದ್ದರಿಂದ ಪುನಃ ರೀಆಕ್ಷನ್ ಆಗಿದೆ. ೧೯೬೭-೬೮ನೇ ಸಾಲಿಗೆ ೬ ಲಕ್ಷ ೧೦ ಸಾವಿರಕ್ಕೆ ರೀಆಕ್ಷನ್ ಆಗಿದೆ. ಆದರೂ ಕೂಡ ಸಂಬಂಧಪಟ್ಟ ಎಕ್ಸೈಜ್ ಸೂಪರಿಂಟೆಂಡೆಂಟ್‌ರವರಿಗೆ ಈಗಾಗಲೇ ಷೋಕಾಸ್ ನೋಟೀಸ್ ಇಷ್ಯೂ ಮಾಡಲಾಗಿದೆ. As soon as we get reply we will take action against our officers.

ಶ್ರೀ ಗೋಪಾಲ ಮಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಅವರು ಏನು ಹೇಳಿದರೋ ನನಗೆ ಅರ್ಥವಾಗಲಿಲ್ಲ. ಭದ್ರಾವತಿಯ ಒಂದು ತಾಲ್ಲೂಕಿನಲ್ಲಿ ಒಂದು ತಿಂಗಳಿಗೆ ಮೂರು ಲಕ್ಷ ರೂಪಾಯಿ ಲಾಸಾಗಿದೆ. ಇಡೀ ಕರ್ನಾಟಕದಲ್ಲಿ ಎಷ್ಟು ಲಾಸಾಗಿದೆ. ಟೆಂಡರ್ ಕರೆಯುವ ಮುನ್ನ ಪ್ರಾರಂಭದಲ್ಲಿ ಡಿಪಾಸಿಟ್ ಕಟ್ಟಿಸಿಕೊಂಡು ಕೊಟ್ಟಿರುತ್ತಾರೆ. ಲಾಸ್ ಆಗುವಂಥ ಪ್ರಶ್ನೆಯೇ ಇಲ್ಲ. ಇದರಲ್ಲಿ ಅಧಿಕಾರಿಗಳು ಕೂಡ ಷಾಮೀಲಾಗಿದ್ದಾರೆ. ಅವರನ್ನೂ ಇನ್ನೂ ಸಸ್ಪೆಂಡ್ ಮಾಡಿಲ್ಲ. ಇದಕ್ಕೆ ಉತ್ತರ ಕೊಡಿ.

ಶ್ರೀ ಡಿ. ಬಿ. ಇನಾಮದಾರ್.—ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಹೇಳಿದ್ದೇನೆ. ಬೇನಾಮಿದಾರ ಅಲ್ಲವೇ ಹೌದೇ ಎನ್ನುವ ವಿಚಾರದಲ್ಲಿ ತಾವು ಏತಕ್ಕೆ ವರದಿ ಮಾಡಿಲ್ಲ ಎಂದು ಕೂಡ ಕೇಳಿದ್ದೇವೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಇದೇ ವ್ಯಕ್ತಿ ಬೇರೆ ತಾಲ್ಲೂಕುಗಳಲ್ಲಿ ಕಂಟ್ರಾಕ್ಟ್ ತೆಗೆದುಕೊಂಡಿಲ್ಲವೆ ? ಭದ್ರಾವತಿಯಲ್ಲಿ ಆ ವ್ಯಕ್ತಿ ಸೌಂಡ್ ಇಲ್ಲದೇ ಇರುವಾಗ ಬೇರೆ ತಾಲ್ಲೂಕುಗಳಲ್ಲಿ ಯಾವ ರೀತಿ ಸೌಂಡ್ ಇದ್ದಾನೆ. ೭ ಲಕ್ಷ ರೂಪಾಯಿಗಳಿಗೆ ಟೆಂಡರ್ ಇದ್ದದ್ದು ಅದನ್ನು ೩ ಲಕ್ಷಕ್ಕೆ ಇಳಿಸುವುದರಲ್ಲಿ ನಿಮ್ಮ ಹಸ್ತಕ್ಷೇಪ ಇಲ್ಲವೆ ?

ಶ್ರೀ ಡಿ. ಬಿ. ಇನಾಂದಾರ್.—೧೯೬೫-೬೬ರಲ್ಲಿ ೬.೧೦ ಸಾವಿರ ಆಕ್ಷನ್ ಆಗಿತ್ತು. ೧೯೬೬-೬೭ರಲ್ಲಿ ೬.೩ ಸಾವಿರ ಆಯಿತು. ಮತ್ತೆ ರೀ ಆಕ್ಷನ್‌ನಲ್ಲಿ ೬ ೧೦ ಸಾವಿರಕ್ಕೆ ಹೋಗಿದೆ.

ಶ್ರೀ ಆರ್ ಎನ್. ನಾಯಕ್.—ಸ್ವಾಮಿ...

ಅಧ್ಯಕ್ಷರು.—ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ, ಬೇಕಾದರೆ, ಅರ್ಧತಾಸಿನ ಚರ್ಚೆಯಾಗಿ ತನ್ನಿ.

ಶ್ರೀ ಗೋಪಾಲ ಮಂಕುಂದ ಕಾನಡೆ.—ನನ್ನ ಪ್ರಶ್ನೆಗೆ ಸರಿಯಾಗಿ ಉತ್ತರ ಹೇಳಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ, ಇದೇರೀತಿ ಬೇರೆ ತಾಲ್ಲೂಕುಗಳಲ್ಲಿಯೂ ಎಷ್ಟು ಜನ ಇದ್ದಾರೆಂದು ಕೇಳಿದ್ದಾರೆ.

ಅಧ್ಯಕ್ಷರು.—ಉತ್ತರ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದಕ್ಕೆ ಉತ್ತರ ಹೇಳಿಲ್ಲ.

ಅಧ್ಯಕ್ಷರು.—ಈ ರೀತಿ ಗದ್ದಲ ಮಾಡುವುದು ಸರಿಯಲ್ಲ.

(ಗದ್ದಲ)

ಶ್ರೀ ಆರ್. ಎನ್. ನಾಯಕ್.—ಈ ರೀತಿ ಉತ್ತರ ಕೊಟ್ಟರೆ ಏನು ಮಾಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಭದ್ರಾವತಿಯಲ್ಲಿ ಬೇನಾಮಿ ಟ್ರಾನ್ಸ್‌ಕ್ಷನ್‌ನಿಂದ ಲಂಕ್ಷನು ಆಗಿದೆ ಎಂದು ಕೇಳುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಲಿ

ಶ್ರೀ ಡಿ. ಬಿ. ಇನಾಂದಾರ್.—ಆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ, ಬೇರೆ ಪ್ರಶ್ನೆ ಕೇಳಿದರೆ, ಉತ್ತರ ತರಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇದರ ಬಗ್ಗೆ ಹಾಫ್ ಆ್ಯನ್ ಹವರ್ ಡಿಸ್‌ಕಷನ್‌ಗೆ ಹಾಕಿ ನಾನು ಅವಕಾಶ ಕೊಡುತ್ತೇನೆ.

SRI M. MALLIKARJUNA KHARGE.—If so, the action taken against those who have violated the said rules, ಎಂದು ಉತ್ತರದಲ್ಲಿ ಬಂದಿದೆ. ಇದಕ್ಕಲ್ಲಿ ಮಾನ್ಯ ಸದಸ್ಯರು ಉಪ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ತಾವು ಬೇರೆ ಪ್ರಶ್ನೆ ಕೇಳಿ ಅಂದರೆ ಹೇಗೆ ?

ಅಧ್ಯಕ್ಷರು.—ಹಾಫ್ ಅನ್ ಹವರ್ ಡಿಸ್‌ಕಷನ್‌ಗೆ ಕೇಳಿ ನಾನು ಅವಕಾಶ ಕೊಡುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಮೈಕ್ ಸ್ವಿಚ್ ಹಾಕಿ ಕೊಳ್ಳದೆ ಉತ್ತರ ಹೇಳಿ ಕುಳಿತುಬಿಟ್ಟರೆ ನಮಗೆ ಹೇಗೆ ಅರ್ಥವಾಗಬೇಕು.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೆ, ನಮಗೆ ಉಪ ಪ್ರಶ್ನೆ ಕೇಳಲಿಕ್ಕೆ ಇನ್ನೂ ಅವಕಾಶ ಕೊಡಬೇಕು.

ಅಧ್ಯಕ್ಷರು.— ಮಾನ್ಯ ಕಾನಡೆಯವರೆ, ತಾವು ಹಾಫ್ ಅನ್ ಹವರ್ ಡಿಸ್‌ಕಷನ್‌ಗೆ ಕೇಳಿ ನಾನು ಅವಕಾಶ ಕೊಡುತ್ತೇನೆ.

ಶ್ರೀ ಪಟಮಕ್ಕಿರತ್ನಾಕರ್.—ಅಧ್ಯಕ್ಷರೆಮಂತ್ರಿಗಳಿಂದ ಸಮರ್ಪಕವಾಗಿ ಉತ್ತರ ಬರಬೇಕು. ಇಲ್ಲದೇ ಇದ್ದರೆ ನಾವು ಹೇಗೆ ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು.—ಈಗ ನಾನು ಆಫ್ ಅನ್ ಹವರ್ ಡಿಸ್‌ಕಷನ್‌ಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ದಯವಾಮಾಡಿ ಕುಳಿತುಕೊಳ್ಳಿ. ಈಗ ಮುಂದಿನ ಪ್ರಶ್ನೆ ಸಂಖ್ಯೆಯನ್ನು ಶ್ರೀಮತಿ ನಾಗರತ್ನಮ್ಮ ನವರು ಕೇಳಬೇಕು.

ಅರಕಲ ಗೂಡಿನಲ್ಲಿ ಬಸ್ ನಿಲ್ದಾಣ

ಸಂಖ್ಯೆ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ). —ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಕಲಗೂಡಿನಲ್ಲಿ ಬಸ್ ನಿಲ್ದಾಣ ಇಲ್ಲದೇ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರೀ ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರದವರು ಈವರೆವಿಗೂ ಕೈಗೊಂಡಿರುವ ಕ್ರಮಗಳೇನು ಹಾಗೂ ಅದನ್ನು ಯಾವಾಗ ಮಾಡಲಾಗುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ಅರಕಲಗೂಡಿನಲ್ಲಿ ಬಸ್‌ನಿಲ್ದಾಣ ಸ್ಥಾಪಿಸಲಾಗಿದೆ.

ಆ) ಪೆಚ್ಚುತ್ತಿರುವ ಸಾರಿಗೆ ಸೇವೆಯನ್ನು ಪೂರೈಸಲು ಈಗಿನ ಬಸ್ ನಿಲ್ದಾಣವು ಅಸಮರ್ಥವಾಗಿದೆಯೆಂದು ಕಂಡು ಬಂದಿದೆ. ಅದಕ್ಕಾಗಿ ಬೇರೆ ಸ್ಥಳವನ್ನು ಆರಿಸಲಾಗಿದ್ದು ಜಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡ ನಂತರ ಅತ್ಯಾಧುನಿಕ ಬಸ್ ನಿಲ್ದಾಣವನ್ನು ಒದಗಿಸಲಾಗುವುದು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಅರಕಲಗೂಡಿನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಶಂಕು ಸ್ಥಾಪನೆ ಮಾಡುವ ಸಮಯದಲ್ಲಿ, ಗುದ್ದಲಿಪೂಜೆ ಮಾಡುವ ಸಮಯದಲ್ಲಿ, ಈ ಸ್ಥಳ ಸರಿಯಿಲ್ಲ ಎಂದು ಗಲಾಟೆ ಆಗಿದ್ದುದು ನಿಜವೇ ? ಅಲ್ಲಿ ಊರು ಮತ್ತು ಕೋಟೆ ಎಂದು ಎರಡು ಭಾಗ ಇದ್ದು